ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 34 ]
Total No. of Questions : 34 ]

**ಸಂಕೇತ ಸಂಖ್ಯೆ : 89-EK**
**Code No. : 89-EK**

# B

**CCE RR**
**Revised & Unrevised**

**NSQF LEVEL-2**

Question Paper Serial No. **90**

ಇಲ್ಲಿಂದ ಕತ್ತರಿಸಿ

## ವಿಷಯ : ಹೆಲ್ತ್‌ಕೇರ್
## Subject : Health Care

**(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರಗಳು / Kannada and English Versions)**
**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 25. 09. 2020 ] [ Date : 25. 09. 2020
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 10-30 A.M. to 12-45 P.M.
ಗರಿಷ್ಠ ಅಂಕಗಳು : 60 ] [ Max. Marks : 60

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

***General Instructions to the Candidate :***

1. ಈ ಪ್್ರಶ್ನೆಪತ್ರಿಕೆಯು 34 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
   This Question Paper consists of 34 objective and subjective types of question.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This question paper has been sealed by reverse jacket. You have to cut on the right side to open the paper at the time of commencement of the examination. Check whether all the pages of the question paper are intact.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
   Follow the instructions given against both the objective and subjective types of questions.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
   Figures in the right hand margin indicate maximum marks for the question.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.
   The maximum time to answer the paper is given at the top of the question paper. It includes 15 minutes for reading the question paper.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : $10 \times 1 = 10$

*Four* alternatives are given for each of the following questions / incomplete statements. Choose the correct alternative and write the complete answer along with its question number and alphabet :

1. 50 ರಿಂದ 200 ಹಾಸಿಗೆ ಸಾಮರ್ಥ್ಯ ಇರುವ ಆಸ್ಪತ್ರೆಯ ವಿಧ

   (A) ಪ್ರಾಥಮಿಕ ಆರೋಗ್ಯ ಕೇಂದ್ರ (B) ಸಮುದಾಯ ಆರೋಗ್ಯ ಕೇಂದ್ರ

   (C) ತಾಲ್ಲೂಕು ಆಸ್ಪತ್ರೆ (D) ಜಿಲ್ಲಾ ಆಸ್ಪತ್ರೆ

   The type of hospital having the bed strength of 50 to 200 is

   (A) Primary health centre (B) Community health centre

   (C) Taluk hospital (D) District hospital

2. ಆರೈಕೆ ಯೋಜನೆಯ ತಯಾರಿ ಹಾಗೂ ಜಾರಿಯು ಒಳಗೊಂಡಿರುವ ಮೊದಲ ಹಂತ

   (A) ಮೌಲ್ಯಾಂಕನ (B) ಸಮಸ್ಯೆ ಪತ್ತೆ ಮಾಡುವುದು

   (C) ಪರಿಹಾರಗಳನ್ನು ಯೋಜಿಸುವುದು (D) ಯೋಜನೆ ಜಾರಿಗೆ ತರುವುದು

   The first step involved in planning and implementation of care plan is

   (A) assessment (B) problem identification

   (C) planning interventions (D) implementation of the plan

3. ಮಾನವನ ದೇಹದಲ್ಲಿ ರಕ್ತದ ಜೀವಕೋಶಗಳು ಉತ್ಪಾದನೆಯಾಗುವ ಭಾಗ

   (A) ಪಿತ್ತಜನಕಾಂಗ (B) ಶ್ವಾಸಕೋಶ

   (C) ಅಸ್ಥಿಮಜ್ಜೆ (D) ಹೃದಯ

   The part that manufactures blood cells in the human body is

   (A) liver (B) lungs

   (C) bone marrow (D) heart

4. ಒಬ್ಬ ವ್ಯಕ್ತಿಯು ಮಾನಸಿಕ ಅಸ್ವಸ್ಥತೆ ಮತ್ತು ಥೈರಾಯಿಡ್ ಗ್ರಂಥಿಯ ಸಮಸ್ಯೆಯಿಂದ ಬಳಲುತ್ತಿದ್ದಾನೆ. ಇದಕ್ಕೆ ಕಾರಣವಾದ ಸೂಕ್ಷ್ಮ ಪೋಷಕಾಂಶದ ಕೊರತೆ

   (A) ಸೋಡಿಯಂ (B) ಅಯೋಡಿನ್

   (C) ಪೊಟ್ಯಾಸಿಯಂ (D) ಮೆಗ್ನೀಷಿಯಂ

   A person is suffering from mental retardation and thyroid gland problem. This is because of the deficiency of the micronutrient

   (A) sodium (B) iodine

   (C) potassium (D) magnesium

5. ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡ್ ಅಣುಗಳ ವಿನಿಮಯ ಪ್ರಕ್ರಿಯೆಯು ಜರುಗುವ ಉಸಿರಾಟ ವ್ಯವಸ್ಥೆಯ ಭಾಗ

   (A) ವಾಯುಕೂಪಿಕೆ (B) ಬ್ರಾಂಕೈ

   (C) ಶ್ವಾಸನಾಳ (D) ನವಿರುಸಿರ್ನಾಳ

   The part of the respiratory system where the exchange process of a oxygen and carbon dioxide occurs in

   (A) alveoli (B) bronchi

   (C) trachea (D) bronchioles

6. ಪಿ.ಆರ್.ಓ. ಇದರ ವಿಸ್ತೃತ ರೂಪ
   (A) ಸಾರ್ವಜನಿಕ ಸ್ವಾಗತಿಸುವ ಅಧಿಕಾರಿ (B) ಸಾರ್ವಜನಿಕ ದಾಖಲೆ ಅಧಿಕಾರಿ
   (C) ಸಾರ್ವಜನಿಕ ನಿಯಂತ್ರಣ ಅಧಿಕಾರಿ (D) ಸಾರ್ವಜನಿಕ ಸಂಪರ್ಕ ಅಧಿಕಾರಿ

   Expanded form of PRO is
   (A) Public Receptionist Officer (B) Public Record Officer
   (C) Public Regulating Officer (D) Public Relations Officer

7. ಮೂಳೆ ಮುರಿದ ಸಂದರ್ಭದಲ್ಲಿ ಮೂಳೆ ಅಲುಗಾಡದಂತೆ ಆ ಭಾಗದ ರಕ್ಷಣೆಗಾಗಿ ಉಪಯೋಗಿಸುವ ಆರ್ಥೋಪೆಡಿಕ್‌ನ ಯಾಂತ್ರಿಕ ಸಾಧನ
   (A) ಸ್ಲಿಂಗ್ಸ್ (B) ಟಾರ್ನಿಕ್ವೆಟ್ ಬ್ಯಾಂಡೇಜ್
   (C) ಸ್ಪ್ಲಿಂಟ್ಸ್ (D) ಸ್ಟರೈಲ್ ಗ್ಲೋವ್ಸ್

   The orthopedic mechanical device used to immobilize the bone and protect a part of the body in the case of a fracture is
   (A) slings (B) tourniquet bandage
   (C) splints (D) sterile gloves

8. ವ್ಯಕ್ತಿಯು ಮೂರ್ಛೆ ಹೋಗಿದ್ದರೆ ಅವನಿಗೆ ನೀಡಬೇಕಾದ ಪ್ರಥಮ ಚಿಕಿತ್ಸೆ
   (A) ಟಾರ್ನಿಕ್ವೆಟ್ ಬ್ಯಾಂಡೇಜ್‌ನ್ನು ಬಳಸುವುದು (B) ತಲೆ ಮತ್ತು ಕತ್ತನ್ನು ಸಮವಾಗಿಡುವುದು
   (C) ದ್ರವವನ್ನು ಕೊಡುವುದು (D) ಬ್ಲಾಂಕೆಟ್‌ನ್ನು ಹೊದಿಸುವುದು

   The first aid given when the person is unconscious is
   (A) using the tourniquet bandage (B) keeping head and neck aligned
   (C) giving fluid (D) covering with the blanket

9. ಮಿದುಳಿನ ಮತ್ತು ಮಿದುಳು ಬಳ್ಳಿಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಯ ನಂತರ ಬಳಸಬಾರದ ಭಂಗಿ
   (A) ಅಂಗಾತ ಮಲಗುವ ಭಂಗಿ (B) ಮಗ್ಗಲು ಮಲಗುವ ಭಂಗಿ
   (C) ಎಡಮಗ್ಗುಲಿಗೆ ಮಲಗುವ ಭಂಗಿ (D) ಫೌಲರ್‌ನ ಭಂಗಿ

   The position that should not be used after brain and spine related surgery is
   (A) Supine position (B) Dorsal elevated position
   (C) Left lateral position (D) Fowler's position

10. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :
   ಧರ್ನುರ್ವಾಯು : ಕ್ಲಸ್ಟ್ರಿಡಿಯಂ ಟಿಟನಿ :: ಸಿಸ್ಟೈಟಿಸ್ : ..................... .
   (A) ಎಶ್ಚಿರೀಷಿಯಾ ಕೊಲೈ (B) ಮೈಕ್ರೋಬ್ಯಾಕ್ಟೀರಿಯಂ ಲೆಪ್ರೆ
   (C) ಮೈಕ್ರೋಬ್ಯಾಕ್ಟೀರಿಯಂ ಟ್ಯುಬರ್‌ಕ್ಯುಲೋಸಿಸ್ (D) ಸ್ಟ್ರೆಪ್ಟೋಕಾಕಸ್ ಸಲೈವೇರಿಯಸ್

   Choose the correct answer :
   Tetanus : clostridium tetani :: Cystitis : ..................... .
   (A) Escherichia coli (B) Micro-bacterium lephre
   (C) Micro-bacterium tuberculosis (D) streptococcus salivarius

II. ಸೂಕ್ತವಾದ ಉತ್ತರದಿಂದ ಬಿಟ್ಟಿರುವ ಸ್ಥಳವನ್ನು ಭರ್ತಿ ಮಾಡಿ : $4 \times 1 = 4$

Fill in the blanks with suitable answer :

11. ರೋಗಗಳನ್ನು ಉಂಟುಮಾಡುವ ಸೂಕ್ಷ್ಮಜೀವಿಗಳನ್ನು .................... ಎನ್ನುವರು.
   Disease causing microbes are also called .................... .

12. ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿರುವ ರೋಗಿಗಳನ್ನು ಆರೈಕೆ ಮಾಡುವ ಆಸ್ಪತ್ರೆಯ ವಿಧ ..................... .

The type of hospital that takes care of the clients suffering from communicable diseases is ................... .

13. ವೃತ್ತಿಪರ ವೈದ್ಯಕೀಯ ಸಹಾಯವನ್ನು ಪಡೆಯುವ ಮುನ್ನ ಅಗತ್ಯ ತುರ್ತು ವೈದ್ಯಕೀಯ ಸೇವೆಯನ್ನು ನೀಡುವುದನ್ನು ..................... ಎನ್ನುವರು.

The medical attention that is given at the first instance before seeking professional medical help is called .................. .

14. ದೇಹದ ವಿವಿಧ ರಚನೆಗಳು ಹಾಗೂ ಅವುಗಳ ಪರಸ್ಪರ ಸಂಬಂಧಗಳ ಬಗ್ಗೆ ಅಧ್ಯಯನ ಮಾಡುವ ವಿಜ್ಞಾನದ ಶಾಖೆ ..................... .

The science that deals with the structures of the body and the relationship of various parts to each other is known as .................. .

III. 15. ***A-ಪಟ್ಟಿ***ಯಲ್ಲಿ ರೋಗಗಳ ಲಕ್ಷಣಗಳನ್ನು ಹಾಗೂ ***B-ಪಟ್ಟಿ***ಯಲ್ಲಿ ರೋಗಗಳ ಹೆಸರುಗಳನ್ನು ನೀಡಲಾಗಿದ್ದು, ಅವುಗಳನ್ನು ಹೊಂದಿಸಿ, ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : $4 \times 1 = 4$

The symptoms of disease are listed in **Column-A** and the disease are listed in **Column-B.** Match them and write the answers along with their letters.

| | ***A-ಪಟ್ಟಿ / Column-A*** | | ***B-ಪಟ್ಟಿ / Column-B*** |
|---|---|---|---|
| i) | ಶ್ವಾಸಕೋಶಗಳಲ್ಲಿ ಉಂಟಾಗುವ ದೀರ್ಘಕಾಲಿಕ ಹಾಗೂ ತೀವ್ರತರದ ಉರಿಯೂತ<br>Acute and Chronic inflammation of lungs | a) | ಕ್ಯಾನ್ಸರ್<br>Cancer |
| ii) | ಚಳಿಜ್ವರ ಹಾಗೂ ಬೆವರುವಿಕೆ<br>Chills and sweating | b) | ಪೋಲಿಯೋ<br>Polio |
| iii) | ಟಾನ್ಸಿಲ್ ಪ್ರದೇಶದಲ್ಲಿ ಊರಿಯೂತ ಮತ್ತು ಜ್ವರ<br>Fever and inflammation of the tonsils | c) | ನ್ಯೂಮೋನಿಯಾ<br>Pneumonia |
| iv) | ಅನಿಯಂತ್ರಿತ ಕೋಶ ವಿಭಜನೆಗಳಿಂದ ಉಂಟಾಗುವ ಹಾನಿಕಾರಕ ಗಡ್ಡೆ<br>A harmful tumour caused by uncontrolled cell division | d) | ಸೈನ್ಯುಸೈಟಿಸ್<br>Sinusitis |
| | | e) | ಮಲೇರಿಯಾ<br>Malaria |
| | | f) | ಕಾಲರಾ<br>Cholera |
| | | g) | ಗಂಟಲು ಉರಿ<br>Strep throat |

IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $6 \times 1 = 6$

Answer the following questions :

16. ಆಸ್ಪತ್ರೆಯಲ್ಲಿ ಸಾಮಾಜಿಕ ಕಾರ್ಯ ವಿಭಾಗದ ಕಾರ್ಯವೇನು ?

What is the function of social work department in hospitals ?

17. ಆಸ್ಪತ್ರೆಯಲ್ಲಿ ಧೋಬಿಖಾನೆ ವ್ಯವಸ್ಥೆಯ ಪಾತ್ರವೇನು ?
What is the role of laundry service in a hospital ?

18. ಪೂತಿನಾಶನ ಎಂದರೇನು ?
What is sterilization ?

19. ನಾಯಿಕಡಿತದ ಯಾವುದಾದರೂ ಎರಡು ಲಕ್ಷಣಗಳನ್ನು ಬರೆಯಿರಿ.
Write any *two* symptoms of dog bite.

20. ಹಾವು ಕಡಿತಕ್ಕೊಳಗಾದ ವ್ಯಕ್ತಿಯು ಹೆಚ್ಚು ಚಲಿಸಬಾರದು ಏಕೆ ?
Snake bitten person should not have more movements. Why ?

21. ದೀರ್ಘಕಾಲದ ಅನಾರೋಗ್ಯದ ಸಂದರ್ಭದಲ್ಲಿ ಸಾಕಷ್ಟು ಪ್ರಮಾಣದ ಪೂರಕ ಆಹಾರ ನೀಡಬೇಕು. ಏಕೆ ?
It is essential to provide supplementary food during prolonged illness. Why ?

V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $6 \times 2 = 12$

Answer the following questions :

22. ಸಿಸ್ಟೆಮಿಕ್ ಚಕ್ರ ಮತ್ತು ಪಲ್ಮನರಿ ಚಕ್ರಗಳಿಗಿರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.
Write two differences between systemic cycle and pulmonary cycle.

23. ಆರೋಗ್ಯ ಸೇವೆಯಲ್ಲಿ ಪ್ರಾಥಮಿಕ ಆರೈಕೆಯ ಮಟ್ಟವನ್ನು ವಿವರಿಸಿ.
Explain primary care level in health care service.

***ಅಥವಾ / OR***

ಆಸ್ಪತ್ರೆಯಲ್ಲಿ ಸಾಮಾನ್ಯ ಕರ್ತವ್ಯ ಸಹಾಯಕನ ಪ್ರೋತ್ಸಾಹಕ ಕಾರ್ಯಗಳನ್ನು ವಿವರಿಸಿ.
Explain the promotive functions of general duty assistant in a hospital.

24. ಆಸ್ಪತ್ರೆಯಲ್ಲಿ ಸಾಮಾನ್ಯ ಕರ್ತವ್ಯ ಸಹಾಯಕನು ಸೇವಾಕಾಂಕ್ಷಿಗೆ ಆರೈಕೆ ನೀಡಬೇಕಾದರೆ ಅನುಕಂಪ ಮತ್ತು ತಿಳುವಳಿಕೆಯುಳ್ಳವರಾಗಿರಬೇಕು. ಏಕೆ ?
A general duty assistant should be sympathetic and understanding while taking care of client in a hospital. Why ?

25. "ಪೂತಿನಾಶಕ ಮತ್ತು ನಿಷ್ಕ್ರಿಮಿಕಾರಕಗಳ ಪ್ರತಿಜೈವಿಕ ಸಾಮರ್ಥ್ಯವು ಬ್ಯಾಕ್ಟೀರಿಯಗಳ ಬೆಳವಣಿಗೆಯನ್ನು ನಿಯಂತ್ರಿಸುತ್ತದೆ." ಕಾರಣ ಕೊಡಿ.
"Antimicrobial action of disinfectants and antiseptics controls the development of bacterial". Give reason.

26. ವೈದ್ಯಕೀಯ ಸ್ವಾಗತಕಾರನಿಂದ ನಿರ್ವಹಿಸಲ್ಪಡುವ ಕಾರ್ಯಗಳು ಯಾವುವು ?
What are the functions performed by a medical receptionist ?

27. ನರಕೋಶ ಎಂದರೇನು ? ಇದು ದೇಹದ ಯಾವ ಭಾಗಗಳಲ್ಲಿ ಕಂಡುಬರುತ್ತದೆ ? ಅದರ ಕಾರ್ಯವನ್ನು ತಿಳಿಸಿ.

What is a neuron ? In which parts of the body can it be found ? Mention its function.

***ಅಥವಾ / OR***

ಅನುಲೇಪಕ ಅಂಗಾಂಶದ ಯಾವುದಾದರೂ ನಾಲ್ಕು ಕಾರ್ಯಗಳನ್ನು ಪಟ್ಟಿ ಮಾಡಿ.

List any *four* functions of the epithelial tissue.

VI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 4 × 3 = 12

Answer the following questions :

28. ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಯಾವುದಾದರೂ ಮೂರು ವಿಧದ ಪ್ರಯೋಗಾಲಯಗಳನ್ನು ಹೆಸರಿಸಿ ಮತ್ತು ಅವುಗಳ ಕಾರ್ಯಗಳನ್ನು ತಿಳಿಸಿ.

Name any *three* types of laboratories that are generally found in hospitals and mention their functions.

29. ಸಾಮಾನ್ಯ ಕರ್ತವ್ಯ ಸಹಾಯಕನು ರೋಗಿಗಳೊಂದಿಗೆ ವ್ಯವಹರಿಸುವಲ್ಲಿ ಪರಿಣಾಮಕಾರಿ ಸಂವಹನ ಕೌಶಲ್ಯವು ತುಂಬಾ ಉಪಯುಕ್ತವಾಗಿದೆ." ಸಮರ್ಥಿಸಿ.

"Effective communication skills are very useful for general duty assistant in dealing with patients." Justify.

30. ಗಾಯಗಳ ಎರಡು ವಿಧಗಳನ್ನು ತಿಳಿಸಿ. ಅವು ಹೇಗೆ ಉಂಟಾಗುತ್ತವೆ ಮತ್ತು ಅವುಗಳಿಗೆ ನೀಡುವ ಪ್ರಥಮ ಚಿಕಿತ್ಸೆಯನ್ನು ವಿವರಿಸಿ.

Mention two types of cuts. How are they caused ? Explain the first aid given to them.

***ಅಥವಾ / OR***

ಸೆಕೆಂಡ್ ಡಿಗ್ರಿ ಬರ್ನ್‌ನ ಲಕ್ಷಣಗಳನ್ನು ಮತ್ತು ಅದಕ್ಕೆ ನೀಡುವ ಯಾವುದಾದರೂ ನಾಲ್ಕು ಪ್ರಥಮ ಚಿಕಿತ್ಸೆಗಳನ್ನು ಬರೆಯಿರಿ.

Write the symptoms of second degree burn and write any four first aids given for it.

31. "ಅವಶ್ಯಕತೆಗೆ ಅನುಗುಣವಾಗಿ ರೋಗಿಗಳ ಭಂಗಿಯನ್ನು ಆಗಾಗ್ಗೆ ಬದಲಿಸಬೇಕು." ಸಮರ್ಥಿಸಿ.

"Position of the patients should be changed frequently as per the need." Justify.

VII. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $3 \times 4 = 12$

Answer the following questions :

32. ಮಾನವನ ಕಣ್ಣಿನ ನೀಳಛೇದ ನೋಟದ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :

a) ಐರಿಸ್

b) ಕಣ್ಣಿನ ನರ

Draw the diagram of longitudinal section of human eye. Label the following parts :

a) Iris

b) Optic nerve

33. a) ಆರೈಕೆ ಯೋಜನೆಯ ಯಾವುದಾದರೂ ನಾಲ್ಕು ಉದ್ದೇಶಗಳನ್ನು ತಿಳಿಸಿ.

Mention any four objectives of a care plan.

b) ಆಸ್ಪತ್ರೆಯಲ್ಲಿ ಹಾಸಿಗೆ ಸಿದ್ಧತೆಯು ಒಳಗೊಂಡಿರುವ ನಾಲ್ಕು ತತ್ವಗಳನ್ನು ತಿಳಿಸಿ.

Mention any *four* principles involved in bed making in a hospital.

***ಅಥವಾ / OR***

a) ರೋಗಿಗೆ ಮುಖ ಕೆಳಗೆ ಮಾಡಿ ಮಲಗುವ ಭಂಗಿಯಿಂದ ಆಗುವ ನಾಲ್ಕು ಪ್ರಯೋಜನಗಳನ್ನು ಬರೆಯಿರಿ.

Mention the four uses of prone position of a patient.

b) ನಾಡಿ ಪರೀಕ್ಷಿಸುವಾಗ ಅನುಸರಿಸಬೇಕಾದ ನಾಲ್ಕು ಹಂತಗಳನ್ನು ತಿಳಿಸಿ.

Mention the four steps to be followed while examining the pulse.

34. ಆಸ್ಪತ್ರೆಯಲ್ಲಿ ರೋಗಿಗಳ ಅನಿಸಿಕೆಗೆ ಪ್ರತಿಕ್ರಿಯಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಮುಖ್ಯವಾದ ಯಾವುದಾದರೂ ಎಂಟು ಅಂಶಗಳನ್ನು ಬರೆಯಿರಿ.

Write any eight important points to be kept in mind while responding to patients feedback in a hospital.

***ಅಥವಾ / OR***

ಆಸ್ಪತ್ರೆಯ ಹೊರಗೆ ತುರ್ತುಪರಿಸ್ಥಿತಿ (ತುರ್ತುಕರೆಯ) ಸಂವಹನದ ಸಂದರ್ಭದಲ್ಲಿ ಸಾಮಾನ್ಯ ಕರ್ತವ್ಯ ಸಹಾಯಕನ ಪಾತ್ರವನ್ನು ವಿವರಿಸಿ.

Explain the role of general duty assistant during an emergency situation (emergency call ) outside the hospital.